ದಿನಾಂಕಃ 07/06/2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು** ಃ ( 1 ರಿಂದ 5 ಮತ್ತು 9 ನೇ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಾಗಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

**ಪಾಟೀ ಸವಾಲು ಃ 10, 12, ಮತ್ತು 14 ರಿಂದ 17 ನೇ ಪ್ರತಿವಾದಿಗಳ ಪರ ಶ್ರೀ ಎ ವಿ ಕೆ ವಕೀಲರಿಂದಃ**

2. ನಾನು ಹೊಲ ಮನೆ ಕೆಲಸ ಮಾಡುತ್ತೇನೆ. ಬೂದಿಹಾಳ ಗ್ರಾಮದ ಹದ್ದಿನ ಸ.ನಂಃ230/3 ಮತ್ತು 229/2, ಕುಬೀಹಾಳ ಗ್ರಾಮದ ಸ.ನಂಃ78/1, ಕಮಡೊಳ್ಳಿ ಗ್ರಾಮದ ಸ.ನಂಃ194/3 ಜಮೀನುಗಳು ಹಾಗೂ ಇತರ ಜಮೀನುಗಳಿಗೆ ನಾನು ದಾವೆ ಮಾಡಿರುತ್ತೇನೆ. ಸ.ನಂಃ230/3 ರಲ್ಲಿ 4 ಎಕರೆ 3 ಗುಂಟೆ, ಸ.ನಂಃ 229/2 ರಲ್ಲಿ 4 ಎಕರೆ 13 ಗುಂಟೆ, ಸ.ನಂಃ78/1 ರಲ್ಲಿ 10 ಎಕರೆ ಪೈಕಿ 3 ಎಕರೆ ಮತ್ತು ಸ.ನಂಃ194/3 ರಲ್ಲಿ 4 ಎಕರೆ 23 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನುಗಳ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ನಮ್ಮ ತಂದೆ ಮಲ್ಲೇಶಪ್ಪರವರಿಗೆ ಮೂಲ ಪುರುಷ ಬಸಪ್ಪ ಚಿಕ್ಕಪ್ಪನಾಗಬೇಕು. ನಮ್ಮ ತಂದೆಯ ತಂದೆ ಹೆಸರು ಯಲ್ಲಪ್ಪ. ಯಲ್ಲಪ್ಪನ ತಂದೆಯ ಹೆಸರು ಬಸಪ್ಪ. ಬಸಪ್ಪನಿಗೆ ಅಡವೆಪ್ಪ, ಯಲ್ಲಪ್ಪ, ಮಹಾದೇವಪ್ಪ ಮತ್ತು ನಾಗಪ್ಪ ಎಂಬ ನಾಲ್ಕು ಜನ ಮಕ್ಕಳು ಇರುತ್ತಾರೆ. ಅಡವೆಪ್ಪ ಮತ್ತು ಆತನ ಹೆಂಡತಿ ಬಸವ್ವ ತೀರಿಕೊಂಡಿರುತ್ತಾರೆ. ಸದರಿಯವರಿಗೆ ಸಿದ್ದವ್ವ ಎಂಬ ಒಬ್ಬಳೇ

ಮಗಳು ಇರುತ್ತಾಳೆ. 9 ಮತ್ತು 10ನೇ ಪ್ರತಿವಾದಿಗಳು ನನ್ನ ಅಜ್ಜಂದಿರು. ಸದರಿಯವರು ಸಲ್ಲಿಸಿದ ತಕರಾರಿನ ಬಗ್ಗೆ ನನಗೆ ಮಾಹಿತಿ ಇರುತ್ತದೆ. 10, 12 ಮತ್ತು 14 ರಿಂದ 17ನೇ ಪ್ರತಿವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ನಾನು ನೋಡಿ ತಿಳಿದುಕೊಂಡಿರುತ್ತೇನೆ.

3. 10ನೇ ಪ್ರತಿವಾದಿ 11 ನೇ ಪ್ರತಿವಾದಿಯನ್ನು ಮದುವೆ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿಯವರ ದಾಪಂತ್ಯ ಜೀವನದಿಂದ 11(ಎ)ನೇ ಪ್ರತಿವಾದಿ ಜನಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಪ್ರತಿವಾದಿ ಜನಿಸಿದ ಆರು ತಿಂಗಳ ನಂತರ 10 ಮತ್ತು 11ನೇ ಪ್ರತಿವಾದಿಗಳ ನಡುವೆ ಮನಸ್ಥಾಪ ಆಗಿ 11ನೇ ಪ್ರತಿವಾದಿ ತನ್ನ ತವರು ಮನೆಗೆ ಮಗನನ್ನು ಕರೆದುಕೊಂಡು ಹೋಗಿರುತ್ತಾರೆ ಎನ್ನುವುದು ಗೊತ್ತಿಲ್ಲ. ಕುಬೀಹಾಳ ಗ್ರಾಮದ ಹಿರಿಯರು 10 ಮತ್ತು 11ನೇ ಪ್ರತಿವಾದಿಗಳ ನಡುವೆ ರಾಜೀ ಸಂಧಾನ ಮಾಡಿ ಮದುವೆಯನ್ನು ಬಿಡುಗಡೆಗೊಳಿಸಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ರಾಜೀ ಸಂಧಾನ ಸಮಯದಲ್ಲಿ 11(ಎ) ನೇ ಪ್ರತಿವಾದಿಯ ವಯಸ್ಸು ಸುಮಾರು ಒಂದು ವರ್ಷ ಇತ್ತು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನಾನು

4. ನಾನು 3ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. 11(ಎ) ನೇ ಪ್ರತಿವಾದಿ ಬಸಪ್ಪ 1. ಅಡವೆಪ್ಪ, 2. ಯಲ್ಲಪ್ಪ, 3. ಮಹಾದೇವಪ್ಪ, 4. ನಾಗಪ್ಪ ತಂದೆ ಬಸಪ್ಪ ಕುಂಬಾರವರ ಮೇಲೆ ಅದಾ ಸಂಃ57/1993ರನ್ನು ಕುಂದಗೋಳ ನ್ಯಾಯಾಲಯದಲ್ಲಿ ದಾವೆ ಮಾಡಿದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಗಳು ನ್ಯಾಯಾಲಯದಲ್ಲಿ ದಿಃ10/09/1993 ರಲ್ಲಿ ರಾಜೀ ಮಾಡಿಕೊಂಡಿದ್ದು, ಸದರಿ ರಾಜೀಯಲ್ಲಿ 10ನೇ ಪ್ರತಿವಾದಿ ತನ್ನ ಹಿಸ್ಸೆಗೆ ಬದಲಾಗಿ ರೂ 80,000/ ಹಣ ಪಡೆದುಕೊಂಡು ರಾಜೀ ಮಾಡಿಕೊಂಡಿರುತ್ತಾನೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸದರಿ ರಾಜೀ ಪತ್ರಕ್ಕೆ ಅಡವೆಪ್ಪ, ಯಲ್ಲಪ್ಪ, ಮಹಾದೇವಪ್ಪ, ನಾಗಪ್ಪ ಮತ್ತು ಬಸಪ್ಪರವರು ಸಹಿ ಮಾಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ದಿಃ10/09/1993 ರಲ್ಲೆ ನ್ಯಾಯಾಲಯದಲ್ಲಿ ರಾಜೀ ಮಾಡಿಕೊಂಡಿದ್ದರು ಸಹ ನಾನು ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

5. ಸ.ನಂಃ228/1 ಜಮೀನು ದಿಃ10/09/1993 ರಲ್ಲಿ ಆದ ರಾಜೀ ಪ್ರಕಾರ ಖಾತೆ 10 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆಯಾಗಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸ.ನಂಃ228/1 ರಲ್ಲಿ ನನಗೆ ಯಾವುದೇ ಹಿಸ್ಸಾ ಇರುವುದಿಲ್ಲ. ನಾವು ಈಗ ಪ್ರತ್ಯೇಕ ಸಾಗುವಳಿ ಮಾಡುತಿದ್ದೇವೆ. ಆದರೆ ಡಿಕ್ರಿ ಪ್ರಕಾರ ರಾಜೀ ಮಾಡಿಕೊಂಡಿಲ್ಲ. ನಮ್ಮ ತಂದೆಯ ತಂದೆಗೆ ಐದು ಜನ ಗಂಡು ಮಕ್ಕಳು ಮತ್ತು ಎರಡು ಜನ ಹೆಣ್ಣು ಮಕ್ಕಳು ಇರುತ್ತಾರೆ. ನಮ್ಮ ತಂದೆಯ ಸಹೋದರರಾದ ಮುರಗೆಪ್ಪ, ಮಲ್ಲೇಶಪ್ಪ, ಸುರೇಶ, ಷಣ್ಮುಖಪ್ಪ ಮತ್ತು ಅಶೋಕ ಬೇರೆ ವಾಸ ಮಾಡುತಿದ್ದಾರೆ ಎಂದರೆ ಸರಿ. ಸದರಿಯವರು ಪ್ರತ್ಯೇಕವಾಗಿ

ಸಾಗುವಳಿ ಮಾಡುತಿದ್ದಾರೆ ಎಂದರೆ ಸರಿಯಲ್ಲ. ಸದರಿಯವರಿಗೆ ಬೇರೆ ಬೇರೆ ವಾಸ ಮಾಡುತಿದ್ದು, ಪಡಿತರ ಚೀಟಿಗಳು ಸಹ ಬೇರೆ ಬೇರೆ ಇರುತ್ತದೆ. ಪಂಚಾಯಿತಿ ಕರವನ್ನು ಸದರಿಯರು ಪ್ರತ್ಯೇಕವಾಗಿ ಪಾವತಿಸುತ್ತಾರೆ ಎಂದರೆ ಸರಿಯಲ್ಲ. ಬೆಳೆ ಪರಿಹಾರವನ್ನು ಸದರಿಯವರು ಬೇರೆ ಬೇರೆ ತೆಗೆದುಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಸ.ನಂಃ228/1 ರ ಜಮೀನಿನ ಬೆಳೆ ಪರಿಹಾರವನ್ನು ಯಾರೂ ತೆಗೆದುಕೊಳ್ಳುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿಃ10/09/1993 ರಲ್ಲಿ ರಾಜೀ ಡಿಕ್ರಿ ಪ್ರಕಾರ ನಮ್ಮ ತಂದೆಯ ಸಹೋದರರು ಪ್ರತ್ಯೇಕವಾಗಿ ಜಮೀನುಗಳನ್ನು ಸಾಗುವಳಿ ಮಾಡುತಿದ್ದರು ಸಹ ನಾನು ಈಗ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಪ್ರತ್ಯೇಕವಾಗಿ ಜಮೀನು ಸಾಗುವಳಿ ಮಾಡುವ ವಿಚಾರ ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಸ.ನಂಃ228/1 ರಲ್ಲಿ ನನಾಗಲೀ, ಯಲ್ಲಪ್ಪಗಾಗಲೀ, ನಾಗಪ್ಪರವರಾಗಲೀ, ಆಡವೆಪ್ಪರವರಿಗೆ ಯಾವುದೇ ಹಿಸ್ಸಾ ಇಲ್ಲ ಎಂದರೆ ಸರಿ. 10, 12 ಮತ್ತು 14 ರಿಂದ 17ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿಯವರ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಸ.ನಂಃ219 ರಲ್ಲಿ 7 ಎಕರೆ 19 ಗುಂಟೆ ಜಮೀನಿನಲ್ಲಿ ನನಗೆ ಯಾವುದೇ ಹಿಸ್ಸಾ ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು** ಃ ( 11 ಮತ್ತು 13ನೇ ಪ್ರತಿವಾದಿಗಳು ಪರ ವಕೀಲರು ಕಾಲಾವಕಾಶ ಕೋರಿರುತ್ತಾರೆ. ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ದಿಃ 07-06-2023 ರಂದು ಮಧ್ಯಾಹ್ನ 12ಃ25 ರಿಂದ 12ಃ48 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ